ಗುದ್ದಲಿ ಹಿಡಿದು ಅಂಗಳದಲ್ಲೆಂತದೋ ಕೆಲಸದಲ್ಲಿ ತೊಡಗಿತ್ತು.

"ಅದ್ಯಾರದು ಸೋಮಣ್ಣ? ತೋಡು ಬಿಡಿಸ್ತಿರೋದು?"

ಶಿಶಿರ ಕೇಳಿದ. ಅತ್ತ ಹಣಕಿ ನೋಡಿದ ಸೋಮಣ್ಣನ ಮುಖದ ತುಂಬಾ ಅಚಾನಕ್ಕಾಗಿ ತಾತ್ಸಾರ ತುಂಬಿಕೊಂಡಿತು.

"ಓ ಅದಾ... ನಮ್ ಸುಬ್ಬಣ್ಣಯ್ಯನೋರ ಮಗ ರಮೇಶ. ನೀವೆಲ್ಲ ದೊಡ್ಡವ್ರಾಗೋದ್ರೊಳ್ಗೇ ಓದು ಮಗ್ಸಿ ಬೆಂಗ್ಳೂರ್ ಸೇರ್ಕಂಡೋರ್ ಅವ್ರು. ಒಂಥರಾ ವಿಚಿತ್ರ ಜನ. ಹತ್–ಹದಿನೈದ್ ವರ್ಷದಿಂದ ಯಾವ್ದೋ ಕಂಪ್ನೀಲಿ ಕೆಲ್ಸಕ್ಕಿದ್ರು. ನಲವತ್ತೈವತ್ ಸಾವ್ರ ಸಂಬ್ಳ ಬರ್ತಿತ್ತು. ಸುಮ್ನೆ ಮಾಡ್ಕಂಡ್ ಹೋಗೋದ್ ಬಿಟ್ಟು ಟೈಮಿಲ್ಲ, ನೆಮ್ಮದಿ ಇಲ್ಲ, ಊರಲ್ಲಿ ಜಮೀನ್ ಮಾಡ್ತೀನಿ ಅಂತ ಕೆಲ್ಸ ಬಿಟ್ಟು ಊರಿಗೆ ಬಂದ್ರು. ಇರೋ ಶಪ್ಪಡ್ಕಿನ್ ಜಾಗದಲ್ಲಿ ಹಿಂಗೇ ಗುದ್ಲಿ, ಪಿಕಾಸಿ ಹಿಡ್ಕಂಡು ಒಂದಿಷ್ಟು ದಿನ ಗುದ್ದಾಡಿದ್ರು. ಅಲ್ಲಿ ಸಿಟೀಲಿ ಸಾವ್ರಸಾವ್ರ ಕಂಡ ಜೀವ್ನಕ್ಕೆ ಇಲ್ಲಿ ಸಿಗೋ ಚಿಲ್ರೆ ಹಣ ಹೆಂಗ್ ಸಾಕಾದೀತು? ಒಂದಷ್ಟ್ ದಿನ ಒದ್ದಾಡಿ ಕೊನೆಗೆ ಮತ್ತೆ ಬೆಂಗ್ಳೂರಿಗೇ ಹೋದ್ರು. ಇನ್ನೂ ಕೆಲ್ಸ ಸಿಗ್ದೇ ಎಲ್ಲೆಲ್ಲೋ ಅಲೀತಿದಾರಂತೆ. ಪಾಪ ಅವ್ರ ಹೆಂಡ್ತಿ ಯಾವ್ದೋ ಕಂಪ್ನೀಲಿ ಕೆಲ್ಸ ಮಾಡಿ ಮನೆ ನಡೆಸ್ತಿದಾರಂತೆ. ಎಂಥಾ ಮರ್ಲ್ ಜನ ನೋಡಿ..."

ವ್ಯಂಗ್ಯದ ನಗೆಯೊಂದಿಗೆ ಸೋಮಣ್ಣ ಮಾತುಮುಗಿಸಿದ.

ಶಿಶಿರ ನಗಲಿಲ್ಲ. ಯೋಚಿಸತೊಡಗಿದ: ಎಲಾ ಊರ ಮೇಲಿನ ಪ್ರೇಮವೇ! ಬರೀ ಇಪ್ಪತ್ತು–ಮೂವತ್ತರ ಭಾವುಕ ಮನಸ್ಸರನ್ನಷ್ಟೇ ಕಾಡುತ್ತೀಯೆಂದು ತಿಳಿದರೆ ನಲವತ್ತು ದಾಟಿದವರನ್ನೂ ಈ ಪರಿ ಹಿಂಸಿಸುತ್ತೀಯಲ್ಲಾ? ತನ್ನದೇನೋ ಅವಿವಾಹಿತ ಅಲೆಮಾರಿ ಮನಸ್ಸು. ಆದರೆ ವರ್ಷಾನುವರ್ಷಗಳಿಂದ ಅಲ್ಲಿ ಪಟ್ಟಣದಲ್ಲೇ ಮನೆ ಮಾಡಿಕೊಂಡು, ಅಲ್ಲೇ ಹೆಂಡತಿ ಮಕ್ಕಳು, ಬಂಧು–ಬಳಗ, ಸ್ನೇಹಿತ–ಹಿತೈಷಿಗಳಿರುವ 'ಸ್ಥಿರ' ಬದುಕನ್ನು ಕಟ್ಟಿಕೊಂಡವರ ಕನವರಿಕೆಯಲ್ಲೂ ಹುಟ್ಟಿದೂರೇ ಇರುತ್ತದೆಂದರೆ!? ಇದೇನು ಹೋಮ್ ಸಿಕ್ನೆಸ್ಸಾ, ಅಥವಾ ಇರುವುದನ್ನು ಪ್ರೀತಿಸಲಾಗದೆ ಇನ್ನಾವುದಕ್ಕೋ ಹಂಬಲಿಸುವ ಚಂಚಲತೆಯಾ? ಈ ಮುಂಚೆ ತಾನು ಕೆಲಸ ಮಾಡುತ್ತಿದ್ದ ದೊಡ್ಡ ಕಂಪನಿಯಲ್ಲಿ ಲಕ್ಷ ಸಂಬಳ ಪಡೆಯುತ್ತಿದ್ದ ತನ್ನ ಮ್ಯಾನೇಜರ್ ಸಹಾ ಅದೊಂದು ದಿನ ಪೆಟ್ಟಿಗೆ ಅಂಗಡಿಯಲ್ಲಿ ಜೊತೆಗೆ ಟೀ ಕುಡಿಯುತ್ತಾ ನಿಂತಿದ್ದಾಗ 'ಹಳ್ಳಿಯಲ್ಲೊಂದಿಷ್ಟು ಜಮೀನು ಕೊಳ್ಳುತ್ತೇನೆ. ಎರಡು ಹಸು ಕಟ್ಟಿ ಹೈನುಗಾರಿಕೆ ಮಾಡ್ತೇನೆ. ಮನೆಯ ಸುತ್ತ ತರಕಾರಿ ಬೆಳೆಯುತ್ತೇನೆ' ಎಂದೆಲ್ಲಾ ಕನವರಿಸುವವರಂತೆ ಹೇಳಿದ್ದರು. ಹಳ್ಳಿಯವರಿಗೆ 'ಕಾಣುವ' ಪಟ್ಟಣದ ಬದುಕು ಹಾಗೂ ಹಳ್ಳಿಬಿಟ್ಟು ಪಟ್ಟಣ ಸೇರಿಕೊಂಡವರು 'ಅನುಭವಿಸುವ' ಪಟ್ಟಣದ ಬದುಕು – ಒಂದೇ ಎಂಬಂತೆ ಕಾಣುವ ಇವೆರಡರ ನಡುವೆ ಅದೆಷ್ಟೊಂದು ವ್ಯತ್ಯಾಸ! ಎರೆಡು ದಿನ ರಜೆ ಹಾಕಿ ಬಂದು, ಗುದ್ದಲಿ ಹಿಡಿದು ಹೀಗೆ ಜಡಿಮಳೆಯಲ್ಲಿ ತೋಯುತ್ತಾ 'ನಾನೂ ಊರ ಮಗ' ಎಂದು ಸಂಭ್ರಮಿಸುವ ರಮೇಶನಂತಹಾ ಅದೆಷ್ಟು ಅತೃಪ್ತ ಜೀವಗಳನ್ನು ಊರು ಕೊನೆಗೂ ತನ್ನ ಮಡಿಲಿಗೆಳೆದುಕೊಳ್ಳುತ್ತದೆ?

ಯೋಚಿಸುತ್ತಲೇ ಮೇಲೆದ್ದ ಶಿಶಿರನಿಗೆ ಎರಡು ವರ್ಷಗಳ ಪ್ರಾಜೆಕ್ಟ್‌ಗೆಂದು ಜರ್ಮನಿಗೆ ಹೋಗಿ ಬಂದಿದ್ದ ಗೆಳೆಯ ಶ್ಯಾಮನ ಮಾತುಗಳು ನೆನಪಾದವು. ಅಲ್ಲಿ ಹೀಗೆಲ್ಲಾ ಇಲ್ಲವಂತೆ. ಹಳ್ಳಿಯಂತಹಾ ಹಳ್ಳಿಗಳಲ್ಲೂ ಕಂಪನಿಗಳಿದ್ದಾವಂತೆ! ಪಟ್ಟಣದಂತಹಾ ಪಟ್ಟಣಗಳಲ್ಲೂ ಗದ್ದೆ, ತೋಟ, ಹಳ್ಳಗಳಿದ್ದಾವಂತೆ! ಆರು ತಿಂಗಳು ಅಲ್ಲಿದ್ದ ಶ್ಯಾಮ ಪ್ರತಿದಿನ ಆಫೀಸಿಗೆ ಹೋಗಬೇಕಾದರೆ ಗದ್ದೆ–ತೋಟಗಳನ್ನು ದಾಟಿಕೊಂಡು ಹೋಗಬೇಕಿತ್ತಂತೆ! ಅಲ್ಲಿನ ರೈತರೂ ಸಹಾ ಬೆನ್ಜ್ ಕಾರು ಕೊಳ್ಳುತ್ತಾರಂತೆ! ಎಂತಹಾ ಪುಣ್ಯವಂತರು! ನಾವಿಲ್ಲಿ ಆಶ್ಚರ್ಯ ಸೂಚಕ ಚಿಹ್ನೆಗಳಿಂದಲೇ ಕೊನೆಗೊಳಿಸುವ ಅದೆಷ್ಟೋ ಸಂಗತಿಗಳನ್ನು ಅವರು ಸಾಮಾನ್ಯ ವಿಷಯಗಳೆಂಬಂತೆ ನಿತ್ಯಜೀವನದಲ್ಲಿ